<u>ದಿನಾಂಕಃ 19.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.</u>

## ಪಾಟೀಸವಾಲುಃ ಎದುರುದಾರರ ಪರ ಶ್ರೀ. ವಕೀಲರಿಂದಃ–

1. ಎದುರುದಾರರು ನನ್ನ ಹೆಂಡತಿ. ಚೇತನ್ ಹಾಗೂ ಚೈತ್ರ ನನ್ನ ಮಕ್ಕಳು. M.C.25/19 ಕೇಸು ದಾಖಲಿಸುವ ಮುನ್ನ ಎದುರುದಾರರು ನನಗೆ ನೋಟೀಸ್ ನೀಡಿದ್ದರು ಅದಕ್ಕೆ ನಾನು ವಕೀಲರ ಮೂಲಕ ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ.

2. ನಾನು ಅರ್ಜಿಯಲ್ಲಿ ತೋರಿಸಿರುವಂತಹ ನನ್ನ ವಿಳಾಸದಲ್ಲಿ ನಾನು ವಾಸವಾಗಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಅದು ಬಾಡಿಗೆ ಮನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸದರಿ ಮನೆಯ ಬಾಡಿಗೆ ರೂ.5,000/– ಹಾಗೂ ರೂ.30,000/– ಅಡ್ವಾನ್ಸ್ ನೀಡಿರುತ್ತೇನೆ. ಈ ಬಗ್ಗೆ ಕರಾರು ಪತ್ರ ಮಾಡಿಸಿಕೊಂಡಿಲ್ಲ. ಬಾಡಿಗೆ ಕಟ್ಟುವುದಕ್ಕೆ ಯಾವುದೇ ರಶೀದಿ ಕೂಡ ಅವರು ಕೊಡುವುದಿಲ್ಲ. ನಾನು ಸದರಿ ಮನೆಯಲ್ಲಿ ವಾಸವಾಗಿಲ್ಲ, ಬಾಡಿಗೆ ಕೂಡ ಕಟ್ಟುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯ ಎಲೆಕ್ಟ್ರಿಸಿಟಿ–ಬಿಲ್ ಕಟ್ಟುತ್ತೇನೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ.

3. ಸದರಿ ಮನೆಯನ್ನು ನಾನು ನವೆಂಬರ್ – 2022ರಲ್ಲಿ ಖಾಲಿ ಮಾಡಿರುತ್ತೇನೆ. ಸದರಿ ಮನೆಯಲ್ಲಿ ನಾನು ಯಾವ ಕಾಲದಲ್ಲೂ ವಾಸವಾಗಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯ ಮಾಲೀಕರನ್ನು ಕರೆದು, ನಾನು ಸದರಿ ಮನೆಯಲ್ಲಿ ವಾಸವಾಗಿದ್ದೇನೆ ಎಂದು ಸಾಕ್ಷಿ ನುಡಿಸಲು ಕರೆಯುತ್ತೀನಿ ಆದರೆ ಅವರು ಸಾಕ್ಷಿ ನುಡಿಯುತ್ತಾರೋ ಇಲ್ಲವೊ ನನಗೆ ಗೊತ್ತಿಲ್ಲ.

4. ನಾನು ನಿವೃತ್ತ ಶಿಕ್ಷಕನಾಗಿದ್ದು, ಇನ್ನೋವಾ ಕಾರು ಇಟ್ಟುಕೊಂಡು ಬಾಡಿಗೆಗೆ ಕೊಡುತ್ತಿದ್ದೇನೆ ಎಂದರೆ ಸರಿ. ನಾನು ಮನೆ ಕಟ್ಟಲು ಸಾಲ ಮಾಡಿದ್ದಕ್ಕೆ ಸದರಿ

ವಾಹನವನ್ನು ಬಾಡಿಗೆ ಕೊಡುತ್ತಿದ್ದೇನೆ. ಸದರಿ ಕಾರಿಗೆ ನಾನು ನನ್ನ ವಾಸದ ಮನೆಯ ಪಕ್ಕದಲ್ಲಿಯೇ ಪಾರ್ಕಿಂಗ್ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಬೇರೆ ಕಡೆ ಪಾರ್ಕಿಂಗ್ ಮಾಡಿ ತಿಂಗಳಿಗೆ ರೂ.1,000/- ಬಾಡಿಗೆ ಕಟ್ಟುತ್ತೇನೆ. ಶೋಭಾ ಪ್ರಕಾಶ್ ಎಂಬುವವರು ಸದರಿ ಪಾರ್ಕಿಂಗ್ ಮಾಲೀಕರು. ಅದಕ್ಕೆ ಯಾವುದೇ ಕರಾರು ಪತ್ರ ಮಾಡಿಕೊಂಡಿಲ್ಲ. ವಿಶ್ವಾಸದ ಮೇಲೆ ನಾನು ಅಲ್ಲಿ ಪಾರ್ಕಿಂಗ್ ಮಾಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನನ್ನ ವಾಹನ ಪಾರ್ಕ್ ಮಾಡುವ ಜಾಗದಲ್ಲಿ ಅಂಗಡಿ ಇದೆ ಎಂದರೆ, ಸುತ್ತಲೂ ಮನೆಗಳು ಹಾಗೂ ಒಂದು ಚಿಕನ್ ಅಂಗಡಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ.

5. ನಾನು ಒಂದು ವಾಸದ ಮನೆಯನ್ನು ತೆಗೆದುಕೊಂಡು ಅಲ್ಲಿ ಒಂದು ಅಂಗಡಿ ನಡೆಸುತ್ತಿದ್ದು, ಅಲ್ಲಿಯೇ ನನ್ನ ವಾಹನವನ್ನು ಪಾರ್ಕಿಂಗ್ ಮಾಡುತ್ತೇನೆ ಎಂದರೆ ಸುಳ್ಳು. ಸದರಿ ಮನೆಯ ಮಾಲೀಕರ ಹೆಸರು ಆನಂದ್, ಅದು ಮನೆ ನಂ.128/2, ಭೈರವೇಶ್ವರ ನಿಲಯ, ಹೂಟಗಳ್ಳಿ ಎಂದರೆ ಸರಿಯಲ್ಲ. ಸದರಿ ಆನಂದ್ ಈಗ ತೀರಿಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಅದೇ ಮನೆಯಲ್ಲಿ ಒಂದು ಹೆಂಗಸಿನ ಜೊತೆ ವಾಸವಾಗಿದ್ದು, ಅದೇ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತೇನೆ ಎಂದರೆ ಸುಳ್ಳು.

6. ದಾವಾ ಸಲ್ಲಿಸಿದ ನಂತರ ಎದುರುದಾರರು ನನಗೆ ನೋಟೀಸ್ ನೀಡಿದಾಗ ಅದನ್ನು ನಾನು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ಅಂಚೆ-ಕಚೇರಿಯವರು ನನಗೆ ದೂರವಾಣಿ ಮೂಲಕ ನೋಟೀಸ್ ಬಗ್ಗೆ ತಿಳಿಸಿದಾಗ ನಾನು ಸ್ವತಃ ಹೋಗಿ ಪಡೆದಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

7. M.C.25/19 ನಡೆಯುವಾಗ, ನಾನು ಪ್ರಸ್ತುತ ನ್ಯಾಯಾಲಯದಲ್ಲಿರುವ ಬೇರೆ ಪ್ರಕರಣಗಳಲ್ಲಿ ಹಾಜರಾಗುತ್ತಿದ್ದು, M.C.25/19ರ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ಸಹ ಪ್ರಸ್ತುತ ಪ್ರಕರಣದಲ್ಲಿ ನನ್ನ ಪರ ಇರುವ ವಕೀಲರನ್ನೆ ನೇಮಕ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**8.** ಎದುರುದಾರರಾದ ಸುನೀತಾ ಅವರು ಈಗ ಕಾವೇರಿ ಬಡಾವಣೆಯಲ್ಲಿ ವಾಸವಾಗಿದ್ದಾರೆ. ನ್ಯಾಯಾಲಯದ ನೋಟೀಸ್ ಅನ್ನು ನಾನು ಉದ್ದೇಶಪೂರ್ವಕವಾಗಿ ನಾನು ರೆಫ್ಯೂಸ್ ಮಾಡಿ, ನಂತರ ನನ್ನ ವಿರುದ್ಧ **Paper publication** ತೆಗೆದುಕೊಂಡಿದ್ದರು ನಾನು ಗೈರು ಹಾಜರಾಗಿ ಉಳಿದಿರುತ್ತೇನೆ ಎಂದರೆ ಸುಳ್ಳು. ಸದರಿ ಕೇಸಿನ ಬಗ್ಗೆ ನನಗೆ ಗೊತ್ತಿದ್ದರು ಸಹ ಉದ್ದೇಶಪೂರ್ವಕ ನಾನು ಗೈರು ಹಾಜರಿದ್ದು, ನಂತರ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲುಃ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.